**ಸಾಕ್ಷಿಯನ್ನು ದಿಃ 10.07.2025 ರಂದು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ**

1. ನಿಪಿ - 5 ಮತ್ತು 23 ಮಾತ್ರ ನಿಮ್ಮ ಹೆಸರಿನಲ್ಲಿವೆ ಎಂದರೆ, ಸರಿಯಲ್ಲ. ಸದರಿ ದಾಖಲೆಗಳಲ್ಲಿ 2020-21 ರಲ್ಲಿ ಶುಂಠಿ ಬೇಳೆ ನಮೂದಾಗಿಲ್ಲ ಎಂದರೆ, ಸರಿ. ಸಾಕ್ಷಿ ಮುಂದುವರಿದು ನಾವು ಹಾಕಿದ್ದೆವು ಎಂದು ನುಡಿಯುತ್ತಾರೆ.

2. ನೀವು ಹಾಜರುಪಡಿಸಿರುವ ಉಳಿದ ದಾಖಲೆಗಳಿಗೂ ನಿಮಗೂ ಸಂಬಂಧ ಇಲ್ಲ ಎಂದರೆ ಸರಿಯಲ್ಲ.

3. ನಿಮ್ಮ ದೂರಿನಲ್ಲಿ ನಿಮಗೆ ಎಷ್ಟು ಆಸ್ತಿ ಹಾಗೂ ಶುಂಠಿ ಬೆಳೆದ ಬಗ್ಗೆ ಬರೆಸಿಲ್ಲ ಎಂದರೆ, ವಕೀಲರಿಗೆ ಹೇಳಿದ್ದೆ ಎಂದು ನುಡಿಯುತ್ತಾರೆ.

4. ನಿಮ್ಮ ಹೆಸರಿಲ್ಲಿರುವ ನಿಪಿ - 5 ಮತ್ತು 23 ರ ಜಮೀನಿನಲ್ಲಿ 40 ಲಕ್ಷದ ಶುಂಠಿ ಬೆಳೆಯಲು ಆಗುವುದಿಲ್ಲ ಎಂದರೆ ಸರಿಯಲ್ಲ.

5. ಉಳಿಕೆ ದಾಖಲೆಗಳಲ್ಲಿರುವ ಹೆಸರುದಾರರಿಗೆ ಹಾಗೂ ನಿಮಗೆ ಏನು ಸಂಬಂಧ ಎಂದು ದೂರಿನಲ್ಲಿ ಬರೆದಿಲ್ಲ ಎಂದರೆ, ವಕೀಲರಿಗೆ ತಿಳಿಸಿದ್ದೆ ಎಂದು ನುಡಿಯುತ್ತಾರೆ.

6. ನಿಪಿ - 39 ರಿಂದ 55 ರ ದಾಖಲೆಗಳಲ್ಲಿ ನಿಮ್ಮ ಹೆಸರು ಅಥವಾ ಸಹಿ ಇಲ್ಲ ಎಂದರೆ, ನಗದಾಗಿ ಕೊಟ್ಟರೆ ಹೆಸರು ಬರುವುದಿಲ್ಲ ಎಂದು ನುಡಿಯುತ್ತಾರೆ. ಅವುಗಳಲ್ಲಿ ಯಾವ ಸರ್ವೇ ನಂಬರ್ ಎಂದು ಬರೆದಿಲ್ಲ ಎಂದರೆ ಸರಿ.ಅಂಗಡಿಯ ಸೀಲ್ ಇಲ್ಲ ಎಂದರೆ, ಅವರೇ ಬಂದು ಹೇಳುತ್ತಾರೆ ಎಂದು ನುಡಿಯುತ್ತಾರೆ. ಮುಂದಿನ ದಿನಾಂಕದಂದು ಅವರನ್ನು ಕರೆದುಕೊಂಡು ಬಂದು ಸಾಕ್ಷಿ ಮಾಡಿಸುತ್ತೇನೆ.

7. ನಿಮ್ಮ ಹಿಂದಿನ ಸಾಕ್ಷಿ ವಿಚಾರಣೆಯಲ್ಲಿ ಸದರಿ ಅಂಗಡಿಯ ಹೆಸರನ್ನು ಹೇಳಿಲ್ಲ ಎಂದರೆ, ಹೇಳಿದ್ದೇನೆ.

8. ನೀವು ಹಾಜರುಪಡಿಸಿರುವ ದಾಖಲೆಗಳಲ್ಲಿ ನಿಮ್ಮ ಹೆಸರು, ಸಹಿ, ಸರ್ವೇ ನಂಬರ್ ಹಾಗೂ ಅಂಗಡಿಯ ಸೀಲ್ ಇಲ್ಲದಿರುವುದರಿಂದ ಅವುಗಳನ್ನು ಸೃಷ್ಠಿ ಮಾಡಿದ್ದೀರಾ ಎಂದರೆ ಸರಿಯಲ್ಲ. ಸದರಿ ದಾಖಲೆ ನಿಮಗೆ ಸಂಬಂಧಪಟ್ಟಿಲ್ಲ ಎಂದರೆ ಸರಿಯಲ್ಲ.

9. ನೀವು ಈ ಪ್ರಕರಣಕ್ಕಾಗಿ ಸದರಿ ದಾಖಲೆಗಳನ್ನು ಸೃಷ್ಠಿ ಮಾಡಿದ್ದೀರಾ ಎಂದರೆ ಸರಿಯಲ್ಲ.

10. ನೀವು ಹಾಜರುಪಡಿಸಿರುವ ದಾಖಲೆಗಳು 40 ಲಕ್ಷ ಹುಂಡಿ ಬಗ್ಗೆ ಸಂಬಂಧಪಟ್ಟಿಲ್ಲ ಎಂದರೆ ಸರಿಯಲ್ಲ.

11. ನೀವು ಹಾಜರುಪಡಿಸಿರುವ ಜಿ.ಎಸ್.ಟಿ ಬಿಲ್ ಗಳಲ್ಲಿ ಸಹ ನಿಮ್ಮ ಹೆಸರು, ಸಹಿ ಹಾಗೂ ಸಂಬಂಧಪಟ್ಟವರ ಸಹಿ ಇಲ್ಲ ಎಂದರೆ ನಗದಾಗಿ ಕೊಟ್ಟರೆ ಸಹಿ ಹಾಕುವುದಿಲ್ಲ ಎಂದು ನುಡಿಯುತ್ತಾರೆ.

12. ನೀವು ಹಾಜರುಪಡಿಸಿರುವ ದಾಖಲೆಗಳು ಕಾನೂನಿನಲ್ಲಿ ಮಾನ್ಯತೆ ಹೊಂದಿಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯು ಹೇಳಿದಂತೆ ನನ್ನ ಉಕ್ತಲೇಖದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ ಒ

ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ
ಪಿರಿಯಾಪಟ್ಟಣ